ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಗುರುವಾರ, ೨೮, ಆಗಸ್ಟ್, ೨೦೨೫ (ಭಾದ್ರಪದ ,೦೬, ಶಕವರ್ಷ, ೧೯೪೭) BENGALURU, THURSDAY, 28, AUGUST, 2025 (BHADRAPADA ,06, SHAKAVARSHA, 1947)	ಸಂಚಿಕೆ ೧೬೬ Issue 166

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 205 ಸಿಓಎಫ್ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:05.06.2025

ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2024, ಬೆಂಗಳೂರು, ದಿನಾಂಕ:20.05.2025ರ ಆದೇಶ ಭಾಗದ ಪ್ಯಾರಾ-3ರ ನಂತರ ಈ ಕೆಳಕಂಡ ಷರತ್ತನ್ನು ಸೇರ್ಪಡೆಗೊಳಿಸಿ ಓದಿಕೊಳ್ಳತಕ್ಕದ್ದು.

"ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ರೂ.472.00 ಲಕ್ಷಗಳ ಮೊತ್ತವನ್ನು ಖಜಾನೆಯಿಂದ ಸೆಳೆಯಲು ಜಂಟಿ ನಿರ್ದೇಶಕರು(ಹೆಚ್.ಆರ್.ಡಿ ಆಡಳಿತ ಮತ್ತು ಇ.ಎಂ), ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರು ಹಣ ಸೆಳೆಯುವ ಅಧಿಕಾರಿಯಾಗಿರುತ್ತಾರೆ. ಸದರಿಯವರು ಹಣ ಸೆಳೆಯುವ ಬಿಲ್‌ನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸತಕ್ಕದ್ದು."

ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-173

DPAR-PRJ/115/2025-DO3-dparegovsec
ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 115 ಪಿಆರ್‌ಜೆ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 14-08-2025

ಸುತ್ತೋಲೆ

ವಿಷಯ: ಇ-ಕಛೇರಿ ತಂತ್ರಾಂಶದಲ್ಲಿ ಸೈಬರ್ ದಾಳಿಗಳಾಗದಂತೆ ಎಚ್ಚರಿಕೆ ವಹಿಸುವ ಕುರಿತು.

ಕರ್ನಾಟಕ ರಾಜ್ಯ ಸರ್ಕಾರದ ಆಡಳಿತದಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಇ-ಕಛೇರಿ ತಂತ್ರಾಂಶವನ್ನು ಜಾರಿಗೊಳಿಸಲಾಗಿದ್ದು, ಸರ್ಕಾರದ ಸಂಪೂರ್ಣ ಕಡತ ನಿರ್ವಹಣೆಯನ್ನು ಇ-ಕಛೇರಿ ತಂತ್ರಾಂಶದ ಮೂಲಕವೇ ನಿರ್ವಹಿಸಲಾಗುತ್ತಿದೆ. ಇ-ಕಛೇರಿ ತಂತ್ರಾಂಶವನ್ನು ಭದ್ರತೆಯ ದೃಷ್ಟಿಯಿಂದ KSAN / NICNET/ NKN/ Web VPN ನೆಟ್ ವರ್ಕ್ ಗಳ ಮೂಲಕ ಕಾರ್ಯನಿರ್ವಹಿಸುವಂತೆ ಮಿತಿಗೊಳಿಸಲಾಗಿದೆ. ಆದಾಗ್ಯೂ ಸರ್ಕಾರಿ ವೆಬ್ ಸೈಟ್ ಗಳ ಮೇಲೆ ಸೈಬರ್ ದಾಳಿಗಳು ಕ್ರಮೇಣ ಹೆಚ್ಚುತ್ತಿರುವ ನಿಟ್ಟಿನಲ್ಲಿ ಈ ಡಿಜಿಟಲ್ ಬೆದರಿಕೆಗಳು ಸರ್ಕಾರದ ಮಹತ್ವದ ದತ್ತಾಂಶ ಹಾಗೂ ವ್ಯವಸ್ಥೆಗಳ ಗೌಪ್ಯತೆ, ಸಮಗ್ರತೆ ಮತ್ತು ಲಭ್ಯತೆಯನ್ನು ಗಂಭೀರವಾಗಿ ಹಾನಿಗೊಳಿಸುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸುವಂತೆ NIC ಸಂಸ್ಥೆಯು ತಿಳಿಸಿದೆ. ಅದರಂತೆ, ಇ-ಆಡಳಿತ ಕೇಂದ್ರದಿಂದ ಇ-ಕಛೇರಿ ತಂತ್ರಾಂಶದ ಭದ್ರತೆಯ ಸಲುವಾಗಿ ತಾಂತ್ರಿಕ ವಿಷಯಗಳ ಕುರಿತು ಹಲವಾರು ಕ್ರಮಕ್ಕೆಗೊಳ್ಳಲಾಗಿದೆ. ಆದಾಗ್ಯೂ ಇ-ಕಛೇರಿ ತಂತ್ರಾಂಶದ ಬಳಕೆದಾರರು ಸಹ ಈ ಕೆಳಕಂಡಂತೆ ಕ್ರಮಗಳನ್ನು ಅನುಸರಿಸಬೇಕಾಗಿರುವುದು ಅತ್ಯವಶ್ಯಕವಾಗಿರುತ್ತದೆ.

1. ಇ-ಕಛೇರಿ ತಂತ್ರಾಂಶದ ಬಳಕೆಯ ನಂತರ ತಮ್ಮ ಕಂಪ್ಯೂಟರ್ ನಲ್ಲಿ ಕಡ್ಡಾಯವಾಗಿ ಲಾಗ್ ಔಟ್ ಆಗುವುದು.

ದು ಆಗಿಂದಾಗ್ಗೆ ಇ-ಕಛೇರಿ ತಂತ್ರಾಂಶದ ಪಾಸ್ ವರ್ಡ್ ನ್ನು ಬದಲಾಯಿಸುವುದು.

3. ಇ-ಕಛೇರಿ ತಂತ್ರಾಂಶದ ಪಾಸ್ ವರ್ಡ್ ನ್ನು ಮೂರನೇ ವ್ಯಕ್ತಿಗಳಿಗೆ ನೀಡದಿರುವುದು.
4. Whitelist ಮಾಡಿಸಿಕೊಂಡು Public Network ಮೂಲಕ ಇ-ಆಫೀಸ್ ತಂತ್ರಾಂಶವನ್ನು ಬಳಕೆ ಮಾಡುತ್ತಿರುವ ಇಲಾಖೆಗಳು ಕಡ್ಡಾಯವಾಗಿ KSWAN ನೆಟ್ ವರ್ಕ್ ಮೂಲಕವೇ ಇ-ಆಫೀಸ್ ತಂತ್ರಾಂಶವನ್ನು ಬಳಸಲು ಕ್ರಮವಹಿಸುವುದು. ಮುಂದುವರೆದು, ಪ್ರವೇಶಾವಕಾಶಕ್ಕಾಗಿ Whitelist ಮಾಡಲಾಗುವ ಎಲ್ಲಾ ಐ.ಪಿ ಗಳನ್ನು ರದ್ದುಗೊಳಿಸಲಾಗುವುದು.
5. ಎರಡು ಹಂತದ ದೃಢೀಕರಣಕ್ಕಾಗಿ ಕೆಲವು ಇ-ಕಛೇರಿ ತಂತ್ರಾಂಶದ Instance ಗಳಲ್ಲಿ ಪರಿಚಯ (Parichay)ಎಂಬ ದೃಢೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದ್ದು, ಇದರಲ್ಲಿ ಬಳಕೆದಾರರು ತಮ್ಮ ಮೊಬೈಲ್ ಸಂಖ್ಯೆಗೆ ಸ್ವೀಕೃತವಾಗುವ OTP ಯನ್ನು ನಮೂದಿಸಿ ಇ-ಕಛೇರಿ ತಂತ್ರಾಂಶಕ್ಕೆ ಲಾಗಿನ್ ಆಗಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ OTP ಯನ್ನು ಯಾವುದೇ ವ್ಯಕ್ತಿಗಳಿಗೆ ನೀಡಬಾರದು.

ಇ-ಆಫೀಸ್ ನೋಡಲ್ ಅಧಿಕಾರಿಗಳು ಎಲ್ಲಾ ಇ-ಆಫೀಸ್ ಬಳಕೆದಾರರು ಮೇಲ್ಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚನೆಗಳನ್ನು ನೀಡುವ ಬಗ್ಗೆ ಕ್ರಮವಹಿಸುವುದು.

(ಪಂಕಜ್ ಕುಮಾರ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

PR-174

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಕ್ಕೆ ಪಾವತಿಸಬೇಕಾಗಿರುವ ವಿದ್ಯುತ್ ಬಿಲ್ಲಿನ ಕುರಿತು.

ಓದಲಾಗಿದೆ:
1. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರ ಪತ್ರ ಸಂಖ್ಯೆ:ಪ್ರವ್ಯ(ವಾಣಿಜ್ಯ)ಉಪ್ರವ್ಯ (ಇಬಿಸಿ)ಸಪ್ರವ್ಯ(ಇಬಿಸಿ)/ಹಿ.ಸ-3/2024-25/703335, ದಿನಾಂಕ:08.07.2024
2. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:ಎಂ.ಎಸ್.ಕೋ/ಎಂ.ಡಿ/ಬಿಎಲ್‌ಆರ್/29-2024-25, ದಿನಾಂಕ:09.08.2024
3. ಇಂಧನ ಇಲಾಖೆಯ ಟಿಪ್ಪಣಿ ಸಂಖ್ಯೆ: Energy 410 NCE 2024, ದಿನಾಂಕ: 11.11.2024ರಲ್ಲಿ ನೀಡಿರುವ ಅಭಿಪ್ರಾಯ.
4. ಸಚಿವ ಸಂಪುಟ ಸಭೆಯ ದಿನಾಂಕ:13.12.2024.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 305 Exp-1/2024, Dated:02.05.2025

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ, ದಿನಾಂಕ:30.06.2024ರ ಅಂತ್ಯಕ್ಕೆ ಬಾಕಿ ಇರುವ ಒಟ್ಟು ರೂ.53,05,24,224.00ಗಳ ವಿದ್ಯುತ್ ಬಿಲ್ ಅನ್ನು ಪಾವತಿಸುವಂತೆ ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ದಿ ಮೈಸೂರು ಷುಗರ್ ಕಂಪನಿಗೆ ದಿನಾಂಕ:31.07.2024 ರವರೆಗೆ ಒಟ್ಟು ರೂ.37,74,95,141.00 ಗಳ ಮೊತ್ತದ ವಿದ್ಯುತ್ ಅನ್ನು ಸರಬರಾಜು ಮಾಡಿರುತ್ತದೆ ಎಂದು ಸದರಿ ಮೊತ್ತಕ್ಕೆ ರೂ.15,71,39,566.00ಗಳ ಬಡ್ಡಿಯನ್ನು ಸೇರಿ ಒಟ್ಟು ರೂ.53,46,34,707.00ಗಳ ವಿದ್ಯುತ್ ಬಿಲ್ ಅನ್ನು ದಿ ಮೈಸೂರು ಷುಗರ್ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸುವುದು ಬಾಕಿ ಇರುತ್ತದೆ ಹಾಗೂ 2017-18ನೇ ಸಾಲಿನಿಂದ ಇದುವರೆವಿಗೂ ಒಟ್ಟು ರೂ.5,04,36,068 ಗಳ ಮೊತ್ತದ ಬಡ್ಡಿಯನ್ನು ದಿ ಮೈಸೂರು ಷುಗರ್ ಕಂಪನಿಯಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ತಿಳಿಸಿರುತ್ತಾರೆ.

ಮೇಲೆ ಓದಲಾದ (3)ರ ಟಿಪ್ಪಣಿಯಲ್ಲಿ, ದಿ ಮೈಸೂರ್ ಶುಗರ್ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಕ್ಕೆ ಪಾವತಿಸಬೇಕಾದ ವಿದ್ಯುಚ್ಛಕ್ತಿ ಬಾಕಿ ಬಿಲ್ ಮೊತ್ತವನ್ನು ಕೂಡಲೇ ಪಾವತಿಸುವಂತೆ ಮುಂದುವರಿದು, ಅಸಲು ಮೊತ್ತದ ಮೇಲಿನ ಬಡ್ಡಿ ಮೊತ್ತವನ್ನು ಮನ್ನಾ ಮಾಡಲು ಇಂಧನ ಇಲಾಖೆಯ ಸಹಮತಿ ಇದೆ ಎಂದು ಇಂಧನ ಇಲಾಖೆಯು ತಿಳಿಸಿರುತ್ತದೆ.

ದಿ ಮೈಸೂರು ಷುಗರ್ ಕಂಪನಿಯು ಸಾರ್ವಜನಿಕ ವಲಯದ ಉದ್ಯಮವಾಗಿದ್ದು, 1950-51 ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಒಟ್ಟು 35 ಹಂಗಾಮುಗಳಲ್ಲಿ ರೂ.34,738.90 ಲಕ್ಷಗಳ ಕ್ರೋಢೀಕೃತ ನಷ್ಟವನ್ನು ಹೊಂದಿರುತ್ತದೆ ಹಾಗೂ ಪ್ರಸ್ತುತ ರೂ.273.48 ಗಳ ಕೋಟಿಗಳಸಾಲವನ್ನು ಹೊಂದಿರುತ್ತದೆ. ದಿ ಮೈಸೂರು ಷುಗರ್ ಕಂಪನಿಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ರೂ.53,46,34,707.00ಗಳ ವಿದ್ಯುತ್ ಬಿಲ್ ಅನ್ನು ಪಾವತಿಸುವುದು ಅಸಾಧ್ಯವಾಗಿರುತ್ತದೆ. ದಿ ಮೈಸೂರು ಷುಗರ್ ಕಂಪನಿಯ ಕಬ್ಬು ಮೀಸಲು

ಕ್ಷೇತ್ರದಲ್ಲಿನ ರೈತರ ಹಿತದೃಷ್ಟಿಯಿಂದ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಕೈಗೊಳ್ಳುವುದು ಮತ್ತು ಕಂಪನಿಯನ್ನು ಆರ್ಥಿಕ ಸಂಕಷ್ಟದಿಂದ ಹೊರತರುವ ಅವಶ್ಯಕತೆಯನ್ನು ಮನಗಂಡು, ಮೇಲೆ ಓದಲಾದ ಕ್ರಮ ಸಂಖ್ಯೆ:(4)ರಂತೆ ನಡೆದ ಸಚಿವ ಸಂಪುಟ ಸಭೆಯು 'ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಪಾವತಿಸಲು ಬಾಕಿ ಇರುವ ವಿದ್ಯುತ್ ಬಿಲ್ಲಿನ ಅಸಲು ಮೊತ್ತ ರೂ.37,74,95,141.00 ಗಳಲ್ಲಿ ಶೇಕಡಾ 50ರಷ್ಟನ್ನು ಪಾವತಿಸಲು ಹಾಗೂ ಅಸಲಿನ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು' ತೀರ್ಮಾನಿಸಿರುತ್ತದೆ.

ಓದಲಾದ ಕ್ರಮ ಸಂಖ್ಯೆ:(4)ರ ಟಿಪ್ಪಣಿಯಲ್ಲಿ **2**025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:6860-04-190-2-01-394–ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು" ರಡಿಯಲ್ಲಿ ಹಂಚಿಕೆ ಮಾಡಿರುವ ರೂ.1888.00 ಲಕ್ಷಗಳ ಮೊತ್ತದಲ್ಲಿ, ನಾಲ್ಕನೇ ಒಂದು ಭಾಗವನ್ನು ಮೊದಲ ಕಂತಿನ ಅನುದಾನವಾಗಿ ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಐ 205 ಸಿಓಎಫ್ 2024,</u>

<u>ಬೆಂಗಳೂರು, ದಿನಾಂಕ: 20ನೇ ಮೇ 2025</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು ಇವರಿಗೆ ಪಾವತಿಸಲು ಬಾಕಿ ಇರುವ ರೂ.53,46,34,707.00ಗಳ ವಿದ್ಯುತ್ ಬಿಲ್ಲಿನ ಮೇಲಿನ ಬಡ್ಡಿ ಮೊತ್ತ ರೂ.15,71,39,566.00ಗಳನ್ನು ಮನ್ನಾ ಮಾಡಿ ಆದೇಶಿಸಿದೆ.

ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಪಾವತಿಸಲು ಬಾಕಿ ಇರುವ ವಿದ್ಯುತ್ ಬಿಲ್ಲಿನ ಅಸಲು ಮೊತ್ತ ರೂ.37,74,95,141.00 ಗಳಲ್ಲಿ ಶೇಕಡಾ 50ರಷ್ಟನ್ನು ಪಾವತಿಸುವುದಕ್ಕಾಗಿ 2025-26ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:6860-04-190-2-01-394–ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು – ರಡಿಯಲ್ಲಿ ಹಂಚಿಕೆ ಮಾಡಿರುವ ರೂ.1888.00 ಲಕ್ಷಗಳ ಮೊತ್ತದಲ್ಲಿ, ಮೊದಲ ಕಂತಿನ ಅನುದಾನವಾಗಿ ರೂ.472.00 ಲಕ್ಷಗಳನ್ನು ಬಿಡುಗಡೆಗೊಳಿಸಿ ಆದೇಶಿಸಿದೆ. ಸದರಿ ಮೊತ್ತವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು – ಈ ನಿಗಮಕ್ಕೆ ಕೂಡಲೇ ಪಾವತಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಮುಂದುವರಿದು, ಉಳಿದ ಮೊತ್ತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಾಗ, ಬಾಕಿ ಇರುವ ಬಿಲ್ಲಿನ ಮೊತ್ತದಲ್ಲಿ ಸಹ-ವಿದ್ಯುತ್ ಘಟಕದ ಮೂಲಕ ಎಷ್ಟು ಬಾಕಿಯನ್ನು ಪಾವತಿಸಲಾಗಿದೆ ಎಂಬ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಮುಂದುವರಿದು, ಇನ್ನುಳಿದ ಶೇಕಡಾ 50ರಷ್ಟು ಅಸಲು ಮೊತ್ತವನ್ನು ಮೈಸೂರು ಷುಗರ್ ಕಂಪನಿಯು ಸ್ವಂತ ವಿದ್ಯುತ್ ಉತ್ಪಾದನೆ (Co-generation) ಮೂಲಕ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗೆ ವಿದ್ಯುತ್ ಸರಬರಾಜು ಮಾಡಿ ಸರಿದೂಗಿಸಲು ಅನುವಾಗುವಂತೆ, ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ (M.O.U) ಮಾಡಿಕೊಳ್ಳಲು ಅನುವಾಗುವಂತೆ ಕರಡು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ದಿನಾಂಕ:13.12.2024ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ (9) ರಲ್ಲಿ {ಸಿ.692/2024} ನೀಡಿರುವ ಅನುಮೋದನೆ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:FD 305 Exp-1/2024, Dated:02.05.2025 ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-175

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮುರಗಮಲ್ಲ ಹೋಬಳಿ, ಮೂಗಲಮರಿ ಗ್ರಾಮದ ಸ.ನಂ.19 ರಲ್ಲಿ 18-27 ಎಕರೆ/ಗುಂಟೆ ಜಮೀನಿನ ಪೈಕಿ 18-27 ಎಕರೆ/ಗುಂಟೆ ಜಮೀನನ್ನು ಏಕಲವ್ಯ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆರವರ ಪತ್ರ ಸಂಖ್ಯೆ: ಎಲ್ಎನ್ ಡಿ/ಸಿಆರ್/160/2023-24, ದಿನಾಂಕ:06.03.2024

*****

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು, ಮುರಗಮಲ್ಲ ಹೋಬಳಿ, ಮೂಗಲಮರಿ ಗ್ರಾಮದ ಸ.ನಂ.19 ರಲ್ಲಿ 19-11 ಎಕರೆ/ಗುಂಟೆ ಪೂರಾ ಜಮೀನನ್ನು ಏಕಲವ್ಯ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲು ಅಗತ್ಯ ಕ್ರಮವಹಿಸುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿರುತ್ತಾರೆ.

ಅದರಂತೆ, ಚಿಕ್ಕಬಳ್ಳಾಪುರ ಜಿಲ್ಲೆ,ಚಿಂತಾಮಣಿ ತಾಲ್ಲೂಕು, ಮುರಗಮಲ್ಲ ಹೋಬಳಿ, ಮೂಗಲಮರಿ ಗ್ರಾಮದ ಸ.ನಂ 19 ರಲ್ಲಿ ಆರ್.ಟಿ.ಸಿ ಯಂತೆ ಒಟ್ಟು ವಿಸ್ತೀರ್ಣ 19-11 ಎಕರೆ/ಗುಂಟೆ ಜಮೀನಿದ್ದು "ಸರ್ಕಾರಿತೋಪು" ಎಂಬುದಾಗಿ ವರ್ಗೀಕರಣಗೊಂಡಿರುತ್ತದೆ ಆಕಾರಬಂದ್‌ನಂತೆ "ಬಿ" ಖರಾಬು ಆಗಿರುತ್ತದೆ. ಗ್ರಾಮಸ್ಥರ ಮಹಜರ್‌ನಂತೆ ಗ್ರಾಮಸ್ಥರ ತಂಟೆ ತಕರಾರು ಇರುವುದಿಲ್ಲ. ಈ ಬಗ್ಗೆ ತಯಾರಿಸಿರುವ ನಕ್ಷೆಯಂತೆ ಸರ್ಕಾರಕ್ಕೆ ಕಾಯ್ದಿರಿಸಬೇಕಾದ ಅಂಶಗಳು ಇರುವುದಿಲ್ಲ ಸದರಿ ಗ್ರಾಮದಲ್ಲಿ ರಾಸುಗಳಿಗೆ ಅನುಗುಣವಾಗಿ ಹೆಚ್ಚುವರಿ ಗೋಮಾಳ ಇರುತ್ತದೆ. ಪ್ರಸ್ತಾಪಿತ ಜಮೀನು ಮಂಜೂರಿ ಕೋರಿ ನಮೂನೆ 50, 53 ಮತ್ತು 57 ರ ಅರ್ಜಿಗಳು ಸಲ್ಲಿಸಿರುವುದಿಲ್ಲ. ಪ್ರಸ್ತಾಪಿತ ಜಮೀನು ಅನಧಿಕೃತ ಸಾಗುವಳಿಯಿಂದ ಮುಕ್ತವಾಗಿರುತ್ತದೆ. ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕ ಇರುತ್ತದೆ.ಸದರಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಇರುವುದಿಲ್ಲ. ಸದರಿ ಜಮೀನು ತೋಪಿನ ಲಕ್ಷಣಗಳನ್ನು ಕಳೆದುಕೊಂಡಿರುತ್ತದೆ. ಮೂಗಲಮರಿ ಗ್ರಾಮದ ಸ.ನಂ 19ರ ಆರ್.ಟಿ.ಸಿ ಮತ್ತು ಆಕಾರ್ ಬಂದ್ ವಿಸ್ತೀರ್ಣಕ್ಕೆ ತಾಳೆ ಇರುತ್ತದೆ. ಈ ಪೈಕಿ 18-27 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಗುರ್ತಿಸಿ, ಏಕಲವ್ಯ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಬಗ್ಗೆ ಮೋಜಣಿದಾರರಿಂದ ನಕ್ಷೆ ತಯಾರಿಸಿ ಸಲ್ಲಿಸಿರುತ್ತಾರೆ.

ಪ್ರಸ್ತಾವಿತ ಸ.ನಂ.19 ರಲ್ಲಿ 19-11 ಎಕರೆ/ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ:ಎಲ್.ಎನ್.ಡಿ.ಸಿಆರ್/201/2018-19 ದಿನಾಂಕ:24/09/2018 ರಂದು ಹಸಿರು ಕರ್ನಾಟಕ ಯೋಜನೆಯಡಿಯಲ್ಲಿ ಊರಿಗೊಂದು ತೋಪುಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 71 ರಡಿಯಲ್ಲಿ ಕಾಯ್ದಿರಿಸಿರುವುದನ್ನು ರದ್ದುಪಡಿಸಿ, ರದ್ದುಪಡಿಸಿರುವ ಜಮೀನಿನ ತಾಲ್ಲೂಕು ಭೂ ಮಾಪಕರು ಗುರ್ತಿಸಿ ವ 18-27 ಎಕರೆ/ಗುಂಟೆ ಜಮೀನನ್ನು ಏಕಲವ್ಯ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅದರಂತೆ, ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಆರ್‌ಡಿ 17 ಎಲ್‌ಜಿಕೆ 2024

ಬೆಂಗಳೂರು ದಿನಾಂಕ: 19.06.2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಮುರಗಮಲ್ಲ ಹೋಬಳಿ, ಮೂಗಲಮರಿ ಗ್ರಾಮದ ಸ.ನಂ 19 ರಲ್ಲಿ ತಾಲ್ಲೂಕು ಭೂ ಮಾಪಕರು ಗುರ್ತಿಸಿರುವ 18-27 ಎಕರೆ/ಗುಂಟೆ ಜಮೀನನ್ನು ಏಕಲವ್ಯ ಮಾದರಿ ವಸತಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 22-ಎ(3)(i) ರನ್ವಯ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ ಜಿಲ್ಲೆರವರಿಗೆ ಸದರಿ ಜಮೀನನ್ನು ಮಂಜೂರು ಮಾಡಿ ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಷರತ್ತುಗಳು:-

1. ಮಂಜೂರಾದ ಜಮೀನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು;
2. ಸದರಿ ಜಮೀನು ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು;
3. ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು;
4. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು
5. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದರೆ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ;
6. ಮಂಜೂರಾದ ಜಮೀನು 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು. ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು
7. ಮಂಜೂರಾದ ಜಮೀನನ್ನು ಹಸ್ತಾಂತರಿಸುವಾಗ ಜಮೀನಿನ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಧಿಕಾರಿಗಳು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ;

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಸಿ. ಬಲರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-176

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಲಕ್ಷ್ಮೀ ನರಸಿಂಹ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೋಟೆ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಕೆಎಂಸಿ-1/73/2025-26, ದಿನಾಂಕ: 04-08-2025

****

ಪ್ರಸ್ತಾವನೆ

ಮೇಲೆ ಓದಲಾದ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, **ಶ್ರೀ ಲಕ್ಷ್ಮೀ ನರಸಿಂಹ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೋಟೆ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ** ಈ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳು ಕ್ರಮಬದ್ಧವಾಗಿ ಬೈಲಾನುಸಾರ ಕಾರ್ಯನಿರ್ವಹಿಸದಿರುವ ಕಾರಣ ಸಂಘದ ಬೈಲಾ ಸಂಖ್ಯೆ: 19 ರ ರೀತ್ಯಾ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28ಸಿ ರಡಿಯಲ್ಲಿನ ಅಂಶಗಳಂತೆ ಸಂಘದ ಆಡಳಿತ ಮಂಡಳಿಯು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಂಪೂರ್ಣ ವಿಫಲತೆ ಹೊಂದುತ್ತಿರುವುದು ಸಂಘದ ಹಿತಾಸಕ್ತಿಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ನೇರವಾಗಿ ವ್ಯತಿರಿಕ್ತ ಪರಿಣಾಮ ಬೀರುವುದು ಕಂಡುಬಂದಿರುತ್ತದೆ. ಅಲ್ಲದೇ ಆಡಳಿತ ಮಂಡಳಿಯ ಕಾರ್ಯನಿರ್ವಹಣೆಯಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾಗಿರುವುದು ಸಾಬೀತಾಗಿರುವುದರಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ ಇವರ ಶಿಫಾರಸ್ಸಿನ ಮೇರೆಗೆ ಸಂಘದ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ನೋಟೀಸ್ ನೀಡಿ, ನಿಯಮಾನುಸಾರ ವಿಚಾರಣೆ ನಡೆಸಿ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಲ್ಲಿ ಸಮನ್ವಯ ಕೊರತೆ ಉಂಟಾಗಿ ಆಡಳಿತ ಮಂಡಳಿಯ ಕಾರ್ಯನಿರ್ವಹಣೆಯಲ್ಲಿ ಇಕ್ಕಟ್ಟಿನ ಸ್ಥಿತಿ ಉಂಟಾಗಿರುವುದು ಸಾಬೀತಾಗಿದ್ದ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(2)(iii) ರೀತ್ಯಾ ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರ ಆದೇಶ ಸಂಖ್ಯೆ: ಡಿಆರ್‌ವೈ:ಎ1/ಎಕ್ಸ್‌ಎಸ್‌ಎನ್/09/2024-25, ದಿನಾಂಕ: 18-12-2024 ಮತ್ತು ಮಾರ್ಪಾಡು ಆದೇಶ ಸಂಖ್ಯೆ:ಡಿಆರ್‌ವೈ:ಎ1/ಎಕ್ಸ್‌ಎಸ್‌ಎನ್/09/2024-25, 24-12-2024 ರ ರೀತ್ಯಾ ಆಡಳಿತಾಧಿಕಾರಿಯನ್ನು 06 ತಿಂಗಳ ಅವಧಿಗೆ ನೇಮಕ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:17-06-2025 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದ್ದರಿಂದ ಶ್ರೀ ಲಕ್ಷ್ಮೀ ನರಸಿಂಹ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೋಟೆ, ಮಳವಳ್ಳಿ ತಾಲ್ಲೂಕು ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಸಂಬಂಧ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ನಿಬಂಧಕರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 222 ಸಿಎಲ್‌ಎಸ್ 2025, ಬೆಂಗಳೂರು, ದಿನಾಂಕ: 05-08-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 121 ರಡಿ ಸರ್ಕಾರಕ್ಕೆ ದತ್ತವಾಗಿರುವ ಅಧಿಕಾರದನ್ವಯಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕರಣ 30(1) ಕ್ಕೆ **ವಿನಾಯಿತಿ ನೀಡಿ, ಶ್ರೀ ಲಕ್ಷ್ಮೀ ನರಸಿಂಹ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೋಟೆ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ** ಇದರ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ: 18-06-2025 ರಿಂದ ಮುಂದಿನ ಆರು ತಿಂಗಳುಗಳವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(**ರಂಗನಾಥ.ಜಿ**)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಹಕಾರ ಇಲಾಖೆ

PR-177

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.
THAMMAIAH